ॐ

# ಪ್ರಬೋಧಿನೀ ಗುರುಕುಲಮ್

ಗುರುಕುಲದ ಶಿಕ್ಷಣವ್ಯವಸ್ಥೆ ನದಿಯ ಪ್ರವಾಹದಂತೆ ನಿರಂತರವಾಗಿ ನಡೆಯುವಂತಹದ್ದು. ವಿಷಮಪರಿಸ್ಥಿತಿಗಳಲ್ಲೂ ಗುರುಕುಲದ ಚಟುವಟಿಕೆಗಳನ್ನು ಆಧುನಿಕ ಸಾಧನಗಳನ್ನು ಬಳಸಿಕೊಂಡು ಕಳೆದ ಎರಡು ವರ್ಷಗಳಿಂದ ನಡೆಸಿಕೊಂಡು ಬಂದಿದ್ದೇವೆ. ಕಳೆದು ಎರಡು ವರ್ಷಗಳಿಂದ ಆನ್ಲೈನ್ ಸಂದರ್ಶನದ ಮೂಲಕ ಮಕ್ಕಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಈ ವರ್ಷದ ಚಟುವಟಿಕೆಗಳ ವರದಿಯು ಈ ಕೆಳಗಿನಂತಿದೆ.

- ದಿನಾಂಕ 16-5-21 ರಂದು ಆನ್ಲೈನ್ ಮೂಲಕ ಗುರುಕುಲದ ಪಾಲಕರ ಸಭೆ ನಡೆಯಿತು.80 ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.
- 23-5-21 ರಿಂದ ಎಲ್ಲ ವಿದ್ಯಾರ್ಥಿಗಳಿಗೂ ಆನ್ಲೈನ್ ಅವಧಿಗಳ ಆರಂಭವಾಗುವ ಮೂಲಕ ಪ್ರಬೋಧಿನೀ ಗುರುಕುಲದ 21-22 ರ ಶೈಕ್ಷಣಿಕ ವರ್ಷ ಶುರುವಾಗಿದೆ.
- 13-6-21 ರಂದು ಆನ್ಲೈನ್ ಮೂಲಕ ಹೊಸ ಮಕ್ಕಳ ಪ್ರವೇಶೋತ್ಸವ ಜರುಗಿತು. ಮೈತ್ರೇಯಿ ಗುರುಕುಲದ ಶ್ರೀಮತಿ ಮಾತೃಶ್ರೀಯವರು ಮಾತನಾಡಿದರು.
- ಜೂನ್ 14 ರಿಂದ 17 ರ ವರೆಗೆ ಮೂರೂ ಗುರುಕುಲದ ಆಚಾರ್ಯ-ಮಾತೃಶ್ರೀಯರ ಆನ್ಲೈನ್ ಪ್ರಶಿಕ್ಷಣ ನಡೆಯಿತು. ಗುರುಕುಲದ ಹಿರಿಯರಾದ ಡಾ. ರಾಮಚಂದ್ರ ಭಟ್ ಕೋಟೆಮನೆ, ಡಾ. ಮಹಾಬಲೇಶ್ವರ ಭಟ್, ಅಂಕಣಕಾರರಾದ ಶ್ರೀ ರೋಹಿತ್ ಚಕ್ರತೀರ್ಥ, ಶ್ರೀ ವಿಶ್ವನಾಥ ಸುಂಕಸಾಲ, ಸಂಘದ ಹಿರಿಯರಾದ ಶ್ರೀ ಮುಕುಂದ, ಶ್ರೀ ಸುಧೀರ್, ಶ್ರೀ ಗುರುಪ್ರಸಾದ್, ಶ್ರೀ ಸು.ರಾಮಣ್ಣ, ಶ್ರೀ ಕಜಂಪಾಡಿ ಸುಬ್ರಹ್ಮಣ್ಯಭಟ್ ಮುಂತಾದವರು ಅವಧಿಗಳನ್ನು ನಡೆಸಿಕೊಟ್ಟರು.
- 21-6-21 ರಂದು ಆನ್ಲೈನ್ ಮೂಲಕ ವಿಶ್ವ ಯೋಗ ದಿನ ಆಚರಿಸಲಾಯಿತು. ಪಾಲಕರು ಮತ್ತು ಛಾತ್ರರನ್ನೊಳಗೊಂಡಂತೆ 100 ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯವಾಹರಾದ ಶ್ರೀ ಜಯಪ್ರಕಾಶ್ ಅವರು ಯೋಗದ ಬಗ್ಗೆ ಮಾತನಾಡಿದರು.
- 23-6-21 ರಂದು ಹಿಂದೂ ಸಾಮ್ರಾಜ್ಯ ದಿನೋತ್ಸವವನ್ನು ಆಚರಿಸಲಾಯಿತು. ಇದರಲ್ಲಿ ನೇರವಾಗಿ 40 ಜನ ಭಾಗವಹಿಸಿದ್ದರು, ಹಾಗೂ ಆನ್ಲೈನ್ ಮೂಲಕ 100 ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ನಾರಾಯಣ ಶೆವಿರೆಯವರು (ಅ.ಭಾ.ಸಾ.ಪ.ರಾಜ್ಯ ಸಂಘಟನಾ ಕಾರ್ಯದರ್ಶಿ) ಬೌದ್ಧಿಕ ವರ್ಗವನ್ನು ನಡೆಸಿದರು.
- 24-7-21 ರಂದು ಗುರುಪೂರ್ಣಿಮಾ ಉತ್ಸವ ನಡೆಯಿತು. ಜಯರಾಮ.ಬೊಳ್ಳಾಜೆ. (ಪರ್ಯಾವರಣ ಗತಿವಿಧಿ ಕರ್ನಾಟಕ ಉತ್ತರ ಮತ್ತು ದಕ್ಷಿಣ ಸಂಯೋಜಕ) ಯವರು ಬೌದ್ಧಿಕ್ ಮಾಡಿದರು.
- 19-8-21 ರಂದು ಧೃತಿ ಮತ್ತು ಅಧಿಪ್ರಜ್ಞ ವಿದ್ಯಾರ್ಥಿಗಳು ಗುರುಕುಲಕ್ಕೆ ಬರುವ ಮೂಲಕ 21-22 ರ ಗುರುಕುಲದ ಶೈಕ್ಷಣಿಕ ವರ್ಷ ಆರಂಭಗೊಂಡಿದೆ.

- **22-8-21** ರಂದು ಯಜುರುಪಾಕರ್ಮ ಹಾಗೂ ರಕ್ಷಾಬಂಧನೋತ್ಸವ ಆಚರಿಸಲಾಯಿತು. ಶ್ರೀ ರಾಮಚಂದ್ರಜಿ ಯವರು (ಶಿವಮೊಗ್ಗ ವಿಭಾಗದ ಬೌದ್ಧಿಕ ಪ್ರಮುಖ) ಬೌದ್ಧಿಕ್ ನಡೆಸಿಕೊಟ್ಟರು.
- **29-8-21** ರಂದು ಪ್ರತಿಭಾ ಗಣದ ವಿದ್ಯಾರ್ಥಿಗಳನ್ನು ಗುರುಕುಲಕ್ಕೆ ಕರೆಯಲಾಯಿತು.
- **30-8-21** ರಂದು ಕೃಷ್ಣ ಜನ್ಮಾಷ್ಟಮಿಯ ಆಚರಣೆ ಮಾಡಲಾಯಿತು.
- **31-8-21** ರಿಂದ **4-9-21** ರ ವರೆಗೆ ಡಾ.ರಾಮಚಂದ್ರಾಚಾರ್ಯ ಮತ್ತು ಶಂಕರನಾರಾಯಣ ಶಾಸ್ತ್ರಿಗಳು ಗುರುಕುಲದಲ್ಲಿ ಇದ್ದು ಮಕ್ಕಳಿಗೆ ವೇದಾಂತ ಮತ್ತು ಯೋಗಪಾಠ ಮಾಡಿದ್ದಾರೆ.
- **3-9-21** ರಂದು ಬೆಳಗಾವಿಯ ಶ್ರೀ ಶಿವಾನಂದ ಗುರೂಜಿ (ಅಲೌಕಿಕ ಧ್ಯಾನ ಮಂದಿರ,ನಿಲಜಿ) ಯವರು ಗುರುಕುಲಕ್ಕೆ ಆಗಮಿಸಿದ್ದರು.
- **4-9-21** ರಂದು 'ರೋಟರಿ ಕೊಪ್ಪ ಮಲ್ನಾಡ್' ವತಿಯಿಂದ ವನಮಹೋತ್ಸವ ಕಾರ್ಯಕ್ರಮ ನಡೆಯಿತು. ಶ್ರೀ ಶಿವಾನಂದ ಗುರೂಜಿಯವರು ಗಿಡ ನೆಡುವ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
- **5-9-21** ರಂದು ಪ್ರಜ್ಞಾ ಗಣದ ವಿದ್ಯಾರ್ಥಿಗಳನ್ನು ಗುರುಕುಲಕ್ಕೆ ಕರೆಸಲಾಯಿತು.
- **17-9-21** ರಂದು ಶ್ರದ್ಧಾ ಗಣದ ವಿದ್ಯಾರ್ಥಿಗಳನ್ನು ಗುರುಕುಲಕ್ಕೆ ಕರೆಯಲಾಯಿತು.
- **14-11-21** ರಂದು ಶ್ರದ್ಧಾ ಮಕ್ಕಳ ದೀಕ್ಷಾ ಕಾರ್ಯಕ್ರಮ ನಡೆಯಿತು. ಪ್ರಥಮ ಪಾಠವನ್ನು ಶ್ರೀ ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿಯವರು ಮಾಡಿದರು. ಮುಖ್ಯ ವಕ್ತಾರರಾಗಿ ಸಹ ಪ್ರಾಂತ ಬೌದ್ಧಿಕ ಪ್ರಮುಖರಾದಂತಹ ಶ್ರೀಕೃಷ್ಣ ಪ್ರಸಾದ್ ಜಿ ಅವರು ಬಂದಿದ್ದರು.ಚಿಕ್ಕಮಗಳೂರಿನ ಉದ್ಯಮಿಗಳಾದ ಶ್ರೀ ರಮೇಶ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.
- **28-11-21** ರಂದು ಅಧಿಪ್ರಜ್ಞ ಹಾಗೂ ಧೃತಿ ಪಾಲಕರ ಪ್ರಶಿಕ್ಷಣ ನಡೆಯಿತು. ಪಾಲಕರಿಗೆ ಖ್ಯಾತ ಅಂಕನಕಾರರು, ಶ್ರೀ ಶೈಲೇಶ್ ಹೊಳ್ಳ ಹಾಗೂ ಡಾ. ಮಹಾಬಲೇಶ್ವರಾಚಾರ್ಯರು ಮಾರ್ಗದರ್ಶನ ಮಾಡಿದರು.
- **6-12-21** ರಿಂದ ಒಂದು ವಾರದ ಕಾಲ ಗೀತಾಜಯಂತಿಯ ನಿಮಿತ್ತ ಗುರುಕುಲದ ಸುತ್ತಲಿನ 4 ಪ್ರಾಥಮಿಕ ಮತ್ತು 1 ಪ್ರೌಢಶಾಲೆಯಲ್ಲಿ ಭಗವದ್ಗೀತೆಯ ಒಂದು ಅಧ್ಯಾಯದ ಪಾಠವನ್ನು 4 ನೇ ತರಗತಿ ಮೇಲ್ಪಟ್ಟ 9ನೇ ತರಗತಿಯ ಒಳಗಿನ ಮಕ್ಕಳಿಗೆ ಮಾಡಲಾಯಿತು. ಸುಮಾರು 260 ಕ್ಕೂ ಹೆಚ್ಚಿನ ಮಕ್ಕಳು ಇದರ ಲಾಭವನ್ನು ಪಡೆದರು.
- **22-12-21** ರಂದು ಗುರುಕುಲದ ಅಧಿಷ್ಠಾತೃ ದೇವತೆಯಾದ ಶ್ರೀ ವಿಶ್ವಂಭರ ಹಾಗೂ ಶ್ರೀ ವೇಣುಗೋಪಾಲ ಕೃಷ್ಣಮಂದಿರದ ವಾರ್ಷಿಕ ವರ್ಧಂತಿ ಜರಗಿತು. ಅಂದು ಗಣಹೋಮ ಹಾಗೂ ವೇಣುಗೋಪಾಲಕೃಷ್ಣ ಹೋಮವನ್ನು ಮಾಡಲಾಯಿತು.
- **1-1-22 & 2-1-22** ಎರಡು ದಿನಗಳ ಪಾಲಕಪ್ರಶಿಕ್ಷಣ ನಡೆಯಿತು. ಡಾ.ಕಲ್ಲಡ್ಕ ಪ್ರಭಾಕರ ಭಟ್, ವಿದ್ವಾನ್ ಟಿ.ಎನ್.ಪ್ರಭಾಕರ, ಶ್ರೀ ದೀಪಕ್ ದೊಡ್ಡಯ್ಯ, ಶ್ರೀ ಪಟ್ಟಾಭಿರಾಮ, ವಿದ್ವಾನ್ ಮಹೇಶ್

ಕಾಕತ್ಕರ್, ಶ್ರೀ ಅರವಿಂದ ಮೇಲುಕೊಪ್ಪ, ಡಾ|| ಶ್ರೀಪತಿ ಅಡಿಗ ಮುಂತಾದವರು ಪಾಲಕರಿಗೆ ಮಾರ್ಗದರ್ಶನ ಮಾಡಿದರು.

- 1-1-22 ರ ಸಂಜೆ ಗುರುಕುಲದ ಮಾಧವ ಶಾಖೆಯ ಶಾಖಾ ವಾರ್ಷಿಕೋತ್ಸವ ನಡೆಯಿತು. ಕೊಪ್ಪದ ಪ್ರಸಿದ್ಧ ವರ್ತಕರಾದ ಜಯಲಕ್ಷ್ಮೀ ಸಮೂಹ ಸಂಸ್ಥೆಯ ಶ್ರೀ ದಯಾನಂದ ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಡಾ. ಕಲ್ಲಡ್ಕ ಪ್ರಭಾಕರ ಭಟ್ ರವರು ಬೌದ್ಧಿಕ್ ನಡೆಸಿಕೊಟ್ಟರು.
- 10-1-22 ರಂದು ಕೊಪ್ಪದ ಆಯುರ್ವೇದ ಮಹಾವಿದ್ಯಾಲಯದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಶರೀರ ರಚನಾ ಶಾಸ್ತ್ರದ ಬಗ್ಗೆ ಮಕ್ಕಳಿಗೆ ಒಂದು ದಿನದ ಕಾರ್ಯಾಗಾರವನ್ನು ನಡೆಸಿದರು.
- ಈ ವರ್ಷ ಹೊಸದಾಗಿ ಮಕ್ಕಳಿಗೆ ಗಮಕ ಪಾಠದ ಆರಂಭವಾಗಿದೆ. ಹೊಸಹಳ್ಳಿಯ ಶ್ರೀಯುತ ಪ್ರಸಾದ ಭಾರದ್ವಾಜ್ ಇವರು ಗಮಕ ಪಾಠವನ್ನು ಮಕ್ಕಳಿಗೆ ಮಾಡುತ್ತಿದ್ದಾರೆ.
- ತೀರ್ಥಹಳ್ಳಿಯ ಬಾಳಗಾರು ಅಕ್ಷೋಭ್ಯತೀರ್ಥಮಠದಿಂದ ಆಯೋಜಿಸಲಾದ ಕಂಠಪಾಠ ಪರೀಕ್ಷೆಯಲ್ಲಿ ಗುರುಕುಲದ ಇಬ್ಬರು ವಿದ್ಯಾರ್ಥಿಗಳು ಸಂಪೂರ್ಣ ಭಗವದ್ಗೀತೆ ಮತ್ತು ಅಮರಕೋಶವನ್ನು ಕಂಠಪಾಠ ಮಾಡಿ ಭಾಗವಹಿಸಿದ್ದರು. ಹಾಗೂ ಸಂಸ್ಕೃತ ಭಾರತಿಯಿಂದ ಶಿವಮೊಗ್ಗದಲ್ಲಿ ಆಯೋಜಿಸಲಾದ ಭಾಷಣ ಸ್ಪರ್ಧೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿಷಯ – 'ಪ್ರಾಥಮಿಕಶಿಕ್ಷಣಸ್ತರೆ ಸಂಸ್ಕೃತಶಿಕ್ಷಣಸ್ಯ ಆವಶ್ಯಕತಾ'. 'ವಿವೇಕ ವೀರ ಭಾರತ' ಎಂಬ ವಿಷಯದಲ್ಲಿ ಆಯೋಜಿಸಲಾದ ರಾಜ್ಯ ಸ್ತರೀಯ ಪ್ರಬಂಧ ಸ್ಪರ್ಧೆಯಲ್ಲಿ ಒಬ್ಬ ವಿದ್ಯಾರ್ಥಿಯು ಭಾಗವಹಿಸಿ ತೃತೀಯ ಸ್ಥಾನವನ್ನು ಪಡೆದಿರುತ್ತಾನೆ.
- 16-1-22 ರಂದು ಪುತ್ತೂರಿನ ಯೋಗ ಶಿಕ್ಷಕ ಶ್ರೀ ಕರುಣಾಕರ ರವರು ಧೃತಿ ಹಾಗೂ ಅಧಿಪ್ರಜ್ಞ ವಿದ್ಯಾರ್ಥಿಗಳಿಗೆ ಯೋಗಪ್ರಶಿಕ್ಷಣ ನೀಡಿದರು.
- 3-2-22 ರಂದು ಪ್ರತಿಭಾ ಮತ್ತು ಪ್ರಜ್ಞಾಗಣದ ವಿದ್ಯಾರ್ಥಿಗಳಿಗೆ 'ಧೀ ದೀಕ್ಷಾ' (ಉಪನಯನ ಸಂಸ್ಕಾರ) ಕಾರ್ಯಕ್ರಮ ನಡೆಯಿತು.
- 6-2-22 ರಂದು ಮಕ್ಕಳು ಹಾಗೂ ಆಚಾರ್ಯರು ಸೇರಿ ಸಮೀಪದ ಐತಿಹಾಸಿಕ ಕೋಟೆಗುಡ್ಡ ಚಾರಣ ನಡೆಸಿದರು
- 7-2-22 ರಂದು ರಥಸಪ್ತಮಿಯ ಪ್ರಯುಕ್ತ ಮಕ್ಕಳು ಹಾಗೂ ಆಚಾರ್ಯರು ಸಾಮೂಹಿಕವಾಗಿ 108 ಸೂರ್ಯನಮಸ್ಕಾರ ಮಾಡಲಾಯಿತು.
- 24-2-22 ರಂದು ಮೃದಂಗ ವಾದಕರಾದ ಕರ್ನಾಟಕ ಕಲಾಶ್ರೀ ವಿದ್ವಾನ್ ಸೂರ್ಲಿ ಗಣೇಶ ಮೂರ್ತಿ ಯವರ ಶಿಷ್ಯವೃಂದದವರು ಸಂಗೀತ ಕಛೇರಿ ನಡೆಸಿಕೊಟ್ಟರು.
- 26-2-22 ರಂದು ಧೃತಿಗಣದ ಪಾಲಕರು ಮಾತೃಭೋಜನ ಕಾರ್ಯಕ್ರಮ ನಡೆಸಿಕೊಟ್ಟರು.
- 27-2-22 ರಂದು ಧೃತಿಗಣದ ವಿದ್ಯಾರ್ಥಿಗಳ ಶುಭಾಶಂಸನ ಕಾರ್ಯಕ್ರಮ ನಡೆಯಿತು. ಶ್ರೀ ಪ್ರಸನ್ನಾಚಾರ್ಯರು ಅವರ ಮುಂದಿನ ಜೀವನಕ್ಕೆ ಮಾರ್ಗದರ್ಶನ ಮಾಡಿದರು.

- 3-3-22 ರಂದು 7 ಜನ ವಿದ್ಯಾರ್ಥಿಗಳ 'ಸಾಧನಾದರ್ಶನ' ಕಾರ್ಯಕ್ರಮ ನಡೆಯಿತು. ಹರಿಹರಪುರ ನಿವಾಸಿಗಳಾದ ಡಾ. ಅಶ್ವಿನ್ ಶಾಸ್ತ್ರಿ (ಆಯುರ್ವೇದ ವೈದ್ಯರು) ಉಪಸ್ಥಿತರಿದ್ದು ಮಕ್ಕಳನ್ನು ಪ್ರೋತ್ಸಾಹಿಸಿದರು.
- ಮಾರ್ಚ್ 6 ಮತ್ತು 7 ರಂದು ಎರಡು ದಿನಗಳ ಕಾಲ ಶಾಸ್ತ್ರೋಪಕ್ರಮ ಪರೀಕ್ಷೆಗಳು ನಡೆದವು. ಅಧಿಶೀಲ ಸ್ತರದ ವಿದ್ಯಾರ್ಥಿಗಳು ಭಗವದ್ಗೀತೆ, ಮೂಲರಾಮಾಯಣ, ಅಮರಕೋಶ ಇತ್ಯಾದಿ ವಿಷಯಗಳನ್ನು ಕಂಠಪಾಠ ಮಾಡಿ ವಿದ್ವಾಂಸರಿಗೆ ನಿವೇದಿಸಿದರು. ಶೃಂಗೇರಿಯ ವಿದ್ವಾಂಸರಾದ ಶ್ರೀ ನವೀನ್ ರವರು ಪರೀಕ್ಷಕರಾಗಿ ಆಗಮಿಸಿದ್ದರು. ಅಧಿಪ್ರಜ್ಞ ವಿದ್ಯಾರ್ಥಿಗಳು ಸಾಂಖ್ಯಕರಿಕಾ, ತರ್ಕಸಂಗ್ರಹ, ಹಠಯೋಗಪ್ರದೀಪಿಕಾ ಇತ್ಯಾದಿ ವಿಷಯಗಳನ್ನು ಕಂಠಪಾಠದ ಜೊತೆಗೆ ಅರ್ಥಸಹಿತವಾಗಿ ವಿದ್ವಾಂಸರಿಗೆ ನಿವೇದಿಸಿದರು. ಮೈತ್ರೇಯಿ ಗುರುಕುಲದ ಆಚಾರ್ಯರಾದ ಶ್ರೀ ಅನಂತಶರ್ಮಾ ಹಾಗೂ ಶ್ರೀ ರಾಹುಲಾಚಾರ್ಯರು ಪರೀಕ್ಷಕರಾಗಿ ಆಗಮಿಸಿದ್ದರು.
- 11-3-22 ರಂದು 5 ಜನ ವಿದ್ಯಾರ್ಥಿಗಳ 'ಸಾಧನಾದರ್ಶನ' ಕಾರ್ಯಕ್ರಮ ನಡೆಯಿತು. ಡಾ. ರಾಮಚಾಂದ್ರಾಚಾರ್ಯರು ಉಪಸ್ಥಿತರಿದ್ದು ವಿದ್ಯಾರ್ಥಗಳಿಗೆ ಶುಭಹಾರೈಸಿದರು.
- ಮಾರ್ಚ್ ತಿಂಗಳಲ್ಲಿ 8 ರಿಂದ 16 ರ ವರೆಗೆ ಅಧಿಪ್ರಜ್ಞ ವಿದ್ಯಾರ್ಥಿಗಳು ವೇದವಿಜ್ಞಾನ ಗುರುಕುಲದಲ್ಲೇ ಇದ್ದು ಶಾಸ್ತ್ರಾಧ್ಯಯನ ದೃಷ್ಟಿಯಿಂದ ಪ್ರಶಿಕ್ಷಣ ಪಡೆದರು.
- ಸಂಘದ ಎಲ್ಲಾ ಉತ್ಸವಗಳನ್ನು ಹಾಗೂ ಹಬ್ಬ-ಹರಿದಿನಗಳನ್ನು ಯೋಜನಾಬದ್ಧವಾಗಿ ಆಚರಿಸಲಾಗಿದೆ.
- ಗುರುಕುಲಕ್ಕೆ ಭೇಟಿ ನೀಡಿದ ಗಣ್ಯ ವ್ಯಕ್ತಿಗಳು
  - ಶ್ರೀ ಬಾಬು ಕೃಷ್ಣಮೂರ್ತಿ (ಪ್ರಸಿದ್ಧ ಲೇಖಕರು)
  - ಪ್ರೊ|| ಪ್ರೇಮಶೇಖರ (ಪ್ರಸಿದ್ಧ ಅಂಕಣಕಾರರು)
  - ಡಾ|| ವಿ.ವೆಂಕಟಸುಬ್ರಹ್ಮಣಿಯನ್ (Director of ATARI)